ಕರ್ನಾಟಕ ವಿಧಾನಸಭೆ
KARNATAKA LEGISLATIVE ASSEMBLY

Saturday the 26th August 1978, Bhadrapada 4, 1900 S.E.

The House met in the Assembly Chamber, Vidhana Soudha at Nine of the Clock.

[MR. SPEAKER (SRI P. VENKATARAMANA) in the Chair.]

STARRED QUESTIONS
(to which oral answers were given)

Pensionary benefits to Pourakarmikas

135 SRI T. R. SHAMANNA (Basavanagudi).—Will the Minister for Municipal Administration be pleased to state :—

(*a*) whether all the Pourakarmikas of Local bodies (Sweepers and Scavengers) have been given the Pensionary benefit ;

(*b*) if not given, whether Government intends to take steps to give them pensionary benefits ?

SRI H. C. SRIKANTAIAH (Minister for Municipal Administration).—

(*a*) Yes.

(*b*) Does not arise.

†ಶ್ರೀ ಟಿ. ಆರ್. ಶಾಮಣ್ಣ.—ಸಮ್ಮ ಸೇವಾ ಪೃತ್ತಿಯಲ್ಲಿ ಬಡಪ ಕನಿಪ್ಪ ಪೃತ್ತಿ ಎಂದರೆ ಈ ಪೌರ ಕಾರ್ಮಿಕರ ಕೆಲಸ. ಮಾನ್ಯ ಸಾಲಪ್ಪನವರ ಅಧ್ಯಕ್ಷತೆಯಲ್ಲಿ ಪೌರ ಕಾರ್ಮಿಕರ ಜೀವನ ಮತ್ತು ಕೆಲಸ ಗಳ ಬಗ್ಗೆ ಅಧ್ಯಯನ ಮಾಡತಕ್ಕ ಸಮಿತಿಯಲ್ಲಿ ನಾನು ಸದಸ್ಯನಾಗಿದ್ದೆ. ಆ ಸಂದರ್ಭದಲ್ಲಿ ಕರ್ನಾಟಕದ ಎಲ್ಲ ಕಾರ್ಪೊರೇಷನ್‌ಗಳು ಮತ್ತು ಮುನಿಸಿಪಾಲಿಟಿಗಳನ್ನು ನೋಡಿಕೊಂಡುಬರತಕ್ಕ ಸಂದರ್ಭ ಒದಗಿತ್ತು. ಅನೇಕ ಕಡೆ ಪೆನ್‌ಷನ್ ಬಗ್ಗೆ ಯಾವ ಯೋಜನೆಯನ್ನು ಮಾಡಿಲ್ಲ. ಆದರೂ ಕೂಡ ಉತ್ತರದಲ್ಲಿ ಎಲ್ಲ ಕಡೆಗೂ ಕೊಟ್ಟಿದೆ ಹೊಸದಾಗಿ ಕೊಡಬೇಕೆಂಬ ಪ್ರಶ್ನೆ ಉದ್ಭವವಾಗುವುದಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ ಇದರ ಬಗ್ಗೆ ಸತ್ಯಾಂಶವನ್ನು ಮಾನ್ಯ ಮಂತ್ರಿಗಳು ಹೇಳುತ್ತಾರೆಯೆ ?

†ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಈವಾಗ ಕೊಡಬೇಕೆಂದು ಕಾರ್ಪೊರೇಷನ್‌ನವರು ಸಹ ಆಜ್ಞೆಯನ್ನು ಹೊರಡಿಸಿದ್ದಾರೆ. ಸರ್ಕಾರ ಸಹ ಆದೇಶ ಕೊಟ್ಟಿದೆ ಆದರೂ ಕೂಡ ಕೆಲವು ಕಾರ್ಪೊರೇಷನ್ ಗಳಿಗೆ ಕೊಡುವುದಕ್ಕೆ ಆಗಿಲ್ಲ. ಏತಕ್ಕೆಂದರೆ ಅವರಿಗೆ ಹಣಕಾಸಿನ ತೊಂದರೆ ಇದೆ. ಆದ್ದರಿಂದ ಅವರ ಫೈನಾನ್ಷಿಯಲ್ ರಿಸೋರ್ಸಸ್ ಅನ್ನು ನೋಡಿಕೊಂಡು ಯಾವ ರೀತಿ ಹಣವನ್ನು ಒದಗಿಸಬೇಕೆಂಬ ಬಗ್ಗೆ ತೀರ್ಮಾನ ಮಾಡುತ್ತಿದ್ದೇವೆ, ಮತ್ತು ಮಾನ್ಯ ಸಾಲಪ್ಪನವರ ಅಧ್ಯಕ್ಷತೆಯಲ್ಲಿ ಆಗಿರತಕ್ಕ ಸಮಿತಿಯ ತೀರ್ಮಾನ ಕ್ಯಾಬಿನೆಟ್ಟಿನ ಪರಿಶೀಲನೆಯಲ್ಲಿದೆ. ಅಲ್ಲಿ ಪರಿಶೀಲನೆಯಾದ ಬಳಿಕ ಅದನ್ನು ಅನುಷ್ಠಾನಕ್ಕೆ ತರಲಾಗುವುದು.

---

† indicates that remarks or speeches have not been revised by the member concerned.

ಶ್ರೀ ಟಿ. ಆರ್. ಶಾಮಣ್ಣ.—ಈ ಕಾಲದಲ್ಲಿ ವಿದ್ಯಾವಂತರು ವಯಸ್ಸಾದ ಅಪ್ಪ ಅಮ್ಮನಿಗೆ ಊಟ ಹಾಕದಂತಹ ಪರಿಸ್ಥಿತಿ ಇದೆ. ಇಂಥ ಸಂದರ್ಭದಲ್ಲಿ ಕಡು ಬಡವರು ಮತ್ತು ಅವಿದ್ಯಾವಂತರಿರತಕ್ಕ ಸಂಸಾರಗಳಲ್ಲಿ ಅನೇಕ ವರ್ಷಗಳ ಕಾಲ ಪೌರ ಸೌಲಭ್ಯದ ಬಗ್ಗೆ ತಮ್ಮ ಹೋರಾಟವನ್ನು ನಡೆಸಿರತಕ್ಕ ಈ ನಿರ್ಭಾಗ್ಯ ಜನಗಳಿಗೆ ಮುನಿಸಿಪಾಲಿಟಿಗಳು ಹಣವನ್ನು ಕೊಡುತ್ತವೆ ಎಂಬ ಯೋಚನೆಯನ್ನು ಬಿಟ್ಟು ಅವರಿಗೆ ಪೆನ್‌ಷನ್ ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ? ಅದನ್ನು ಮುಂದೆ ನೀವು ಹೇಗಾದರೂ ಅಡ್ಜಸ್ಟ್ ಮಾಡಿಕೊಳ್ಳಿ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಇದಕ್ಕೆ ಸಮ್ಮ ಹಣಕಾಸಿನ ಮಂತ್ರಿಗಳು ಮತ್ತು ಹಣಕಾಸಿನ ಇಲಾಖೆ ಒಪ್ಪಿಗೆ ಕೊಡಬೇಕು. ಕಾರ್ಪೊರೇಷನ್ ಹಾಗೂ ಪುರಸಭೆಗಳ ನೌಕರರ ಪೆನ್‌ಷನ್ ಹಾಗೂ ಇತರೆ ಗ್ರಾಚ್ಯುಯಿಟಿ ಏನು ಇದೆ ಅದನ್ನು ಎಷ್ಟರ ಮಟ್ಟಿಗೆ ಕೊಡಬಹುದೆಂಬ ಬಗ್ಗೆ ಸರ್ಕಾರ ಇದುವರೆಗೆ ಯಾವುದೇ ಒಂದು ರೀತಿಯ ತೀರ್ಮಾನಸ್ಸನ್ನು ತೆಗೆದುಕೊಂಡಿಲ್ಲ, ತೀರ್ಮಾನ ತೆಗೆದುಕೊಳ್ಳುವುದು ಕೂಡ ಕಷ್ಟವಾಗುತ್ತದೆ. ಏಕೆಂದರೆ ಲಕ್ಷಾಂತರ ರೂಪಾಯಿಗಳನ್ನು ಸರ್ಕಾರ ಕೊಡಬೇಕಾದರೆ ಯಾವ ರೀತಿ ಕೊಡಬೇಕು ಮತ್ತು ಹಣಕಾಸಿನ ಇಲಾಖೆಯವರು ಯಾವ ರೀತಿ ಒಪ್ಪಿಗೆ ಕೊಡುತ್ತಾರೆಂಬುದನ್ನು ನೋಡ ಬೇಕಾದುದು ಮೊದಲನೆಯ ಕೆಲಸ. ಎಷ್ಟೋ ಸಂದರ್ಭಗಳಲ್ಲಿ ಸರ್ಕಾರ ಕೊಡಬೇಕೆಂದು ತೀರ್ಮಾನಿಸಿದ್ದನ್ನು ಹಣಕಾಸಿನ ಇಲಾಖೆ ಕೊಡಲಾಗುವುದಿಲ್ಲವೆಂದು ಹೇಳಿರತಕ್ಕ ನಿದರ್ಶನಗಳು ಇವೆ. ಮಾನ್ಯ ಶಾಮಣ್ಣನವರು ಹೇಳಿದ ಹಾಗೆ ಈ ವರ್ಗದ ಜನತೆಯ ಬಗ್ಗೆ ಕನಿಕರ, ಕಳಕಳಿಯನ್ನು ಸರ್ಕಾರ ವ್ಯಕ್ತ ಪಡಿಸಿದೆ, ಮತ್ತು ಅದನ್ನು ಯಾವ ರೀತಿ ಮಾಡಬೇಕೆಂಬುದರ ಬಗ್ಗೆ ಈವಾಗ ನಿಂತಿದೆ. ನಾನು ಅದನ್ನು ಸರ್ಕಾರದ ಮುಟ್ಟಿದಲ್ಲಿ ಚರ್ಚೆ ನಡೆಸಿ, ನಮ್ಮ ಸಂಪುಟದ ಸಭೆಯ ಮುಂದಿಟ್ಟು ಯಾವ್ಯಾಪ ಕಾರ್ಯಕ್ರಮ ಗಳನ್ನು ಹಾಕಬೇಕೋ ಅದನ್ನು ಸರ್ಕಾರ ಹಾಕುತ್ತದೆ.

ಶ್ರೀ ಟಿ. ಆರ್. ಶಾಮಣ್ಣ.—ಹಣಕಾಸಿನ ಕೊರತೆ ಇದೆ ಎಂದು ಹೇಳಿದಿರಿ. ಆದರೆ ಬೆಂಗಳೂರು ನಗರ ಕಾರ್ಪೊರೇಷನ್‌ನಲ್ಲಿ ಮಾತ್ರ ಹಣಕ್ಕೆ ಕೊರತೆ ಏನಿಲ್ಲ. ಅದು ಹಿಂದೆಯೇ ಪೆನ್‌ಷನ್ ಕೊಡ ಬೇಕೆಂದು ತೀರ್ಮಾನಿಸಿ ಸುಮಾರು ೧೮ ಲಕ್ಷ ರೂಪಾಯಿ ೪ ವರ್ಷಗಳ ಕಾಲ ಎಲ್.ಐ.ಸಿ.ಯಲ್ಲಿ ಬಡ್ಡಿ ಇಲ್ಲದೆ ಕೊಳೆಯುತ್ತ ಇತ್ತು. ಆದ್ದರಿಂದ ಅಲ್ಲಿ ತಕ್ಷಣ ಪೆನ್‌ಷನ್ ಕೊಡುವುದರ ಬಗ್ಗೆ ಏರ್ಪಾಡು ಮಾಡ ಲಾಗುತ್ತದೆಯೇ ? ಇದೇ ರೀತಿ ಆದಷ್ಟು ಬೇಗ ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲಲ್ಲಿ ಸರ್ಕಾರದವರು ಇದರ ಬಗ್ಗೆ ತೀವ್ರವಾಗಿ ಯೋಚಿಸಿ ಕಾರ್ಯಕ್ರಮ ತೆಗೆದುಕೊಂಡು ಕೆಲವೇ ತಿಂಗಳಲ್ಲಿ ಈ ಸಮಸ್ಯೆಯನ್ನು ಬಗೆಹರಿ ಸುವ ಬಗ್ಗೆ ಆಶ್ವಾಸನೆ ಕೊಡೀತ್ತೀರಾ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಬೆಂಗಳೂರು ನಗರ ಕಾರ್ಪೊರೇಷನ್‌ನಲ್ಲಿ ಕೊಡಿಸತಕ್ಕ ಏರ್ಪಾಡನ್ನು ಶೀಘ್ರವಾಗಿ ಮಾಡ್ತೇವೆ, ಕಾರ್ಪೊರೇಷನ್ನಿನವರು ಕೂಡ ಸಂಬಂಧಪಟ್ಟ ಆಜ್ಞೆಯನ್ನು ಹೊರಡಿಸಿದ್ದಾರೆ. ಬೆಂಗಳೂರು ನಗರ ಕಾರ್ಪೊರೇಷನ್ನಿಗೆ ಹಣದ ಕೊರತೆ ಏನು ಇಲ್ಲ. ಪೆನ್‌ಷನ್ ಕೊಡುವುದಕ್ಕೆ ಆಥರೈಸೇಷನ್ ಆಗಬೇಕಾಗಿದೆ, ಅದು ಸ್ವಲ್ಪ ವಿಳಂಬವಾಗಿದೆ. ಅದು ಆದತಕ್ಷಣ, ಬೆಂಗ ಳೂರು ನಗರ ಕಾರ್ಪೊರೇಷನ್‌ನಲ್ಲಿ ಮೊದಲೇ ಕೊಡಬೇಕೆಂದು ತೀರ್ಮಾನಿಸಿರುವುದರಿಂದ, ಶೀಘ್ರವಾಗಿ ಕೊಡಿಸಲಾಗುವುದು.

ಶ್ರೀ ಐ. ಪಿ. ಡಿ. ಸಾಲಪ್ಪ.—ಉತ್ತರದಲ್ಲಿ, ಸರ್ಕಾರ ನಿವೃತ್ತಿ ವೇತನ ಸೌಲಭ್ಯಗಳನ್ನು ಎಂದು ಹೇಳಿದ್ದೀರಿ. ಆದರೂ ಕೂಡ ಸೌಲಭ್ಯಗಳನ್ನು ಒದಗಿಸಿಲ್ಲ. ಕೇವಲ ಸರ್ಕಾರಿ ಆಜ್ಞೆಯಲ್ಲಿ ಎಲ್ಲ ಮುನಿಸಿ ಪಾಲಿಟಿಗಳಿಗೂ ಪೆನ್‌ಷನ್ ಕೊಡಬೇಕೆಂದು ಹೇಳಿದ್ದಾರೆ. ಕರ್ನಾಟಕ ರಾಜ್ಯ ಸರ್ಕಾರ ವೃದ್ಧಾಪ್ಯ ವೇತ ವನ್ನು ಇಡೀ ರಾಜ್ಯದಲ್ಲಿ ವೃದ್ಧರಿಗೆ ಕೊಡುತ್ತಿದೆ. ಆದರೆ, ಪಾಪ, ಈ ಬಡಪಾಯಿಗಳು ೫೦-೫೫ ವರ್ಷಗಳ ಕಾಲ ಮುನಿಸಿಪಾಲಿಟಿಗಳಲ್ಲಿ ಕೆಲಸ ಮಾಡಿ ವೃಥಾ ಬೀದಿಯ ಪಾಲಾಗುತ್ತಿದ್ದಾರೆ. ಇವರ ಬಗ್ಗೆ ಸರ್ಕಾರಕ್ಕೆ ಕನಿಕರ ಇಲ್ಲವೆಂದು ಕಾಣುತ್ತದೆ. ಇದಕ್ಕೆ ಮುನಿಸಿಪಾಲಿಟಿಗಳಲ್ಲಿ ಹಣದ ಕೊರತೆ ಏನು ಇದೆ ಮತ್ತು ಸರ್ಕಾರ ಕೂಡ ಹಣಕಾಸಿನ ಇಲಾಖೆ ಒಪ್ಪುವುದಿಲ್ಲವೆಂದು ಹೇಳುತ್ತದೆ. ಹಾಗಾದರೆ ಇವರ ಗತಿ ಏನಾಗ ಬೇಕು ? ಸರ್ಕಾರದಿಂದ ಕಳುಹಿಸತಕ್ಕ ಲೆಂಟ್ ಆಫೀಷಿಯಲ್ಸ್‌ಗೆ ಮುನಿಸಿಪಾಲಿಟಿಗಳಿಂದ ಕೊಡುತ್ತಾರೆ, ಆದರೆ ಪೌರ ಕಾರ್ಮಿಕರಿಗೆ ಮಾತ್ರ ಪೆನ್‌ಷನ್ ಕೊಡಬೇಕೆಂದರೆ ಹಣದ ಮುಗ್ಗಟ್ಟು ಎಂದು ಹೇಳುತ್ತಾರೆ. ಆದ್ದರಿಂದ, ಈ ಒಂದು ತಾರತಮ್ಯವನ್ನು ಹೋಗಲಾಡಿಸುವುದಕ್ಕೆ ಏನಾದರೂ ಒಂದು ಪರಿಹಾರ ಮಾರ್ಗ ವನ್ನು ಸರ್ಕಾರ ಕಂಡುಹಿಡಿಯುತ್ತದೆಯೆ ಎಂದು ಕೇಳುತ್ತೇನೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.– ಅದಕ್ಕೆ ಪರಿಹಾರವನ್ನು ಕಂಡುಹಿಡಿಯೋಣ. ಲೆಂಟ್ ಅಫಿಯಲ್ಸ್‌ನ್ನು ಕೊಡಬೇಕೆಂದರೆ ಸರ್ಕಾರ ಕೆಲವು ಕಂಡೀಷನ್‌ಗಳನ್ನು ಹಾಕುತ್ತದೆ, ಮತ್ತು ಆ ಕಂಡೀಷನ್‌ಗಳಿಗೆ ಕಾರ್ಪೊರೇಷನ್ ಒಪ್ಪುವುದರಿಂದ ಕೊಡಬೇಕೆಂದು ತೀರ್ಮಾನವಾಗಿದೆ. ಉದಾಹರಣೆಗೆ, ಹುಬ್ಬಳ್ಳಿ ಕಾರ್ಪೊರೇಷನ್‌ನಲ್ಲೂ ಹಾಗೆ ಆಯಿತು. ಅಲ್ಲಿಗೆ ಹೋಗಿರತಕ್ಕ ಲೆಂಟ್ ಆಫಿಷಿಯಲ್ಸ್ ಕೇವಲ ೮–೧೦ ಜನ ಮತ್ತು ಅವರಿಗೆ ಪೆನ್‌ಷನ್ ಕಾಂಟ್ರಿಬ್ಯೂಷನ್ ಕೊಡತಕ್ಕದ್ದು ಕೇವಲ ಕೆಲವು ಸಾವಿರ ರೂಪಾಯಿಗಳು. ಮತ್ತು ನಾವು ಈ ನೌಕರರಿಗೆ ಕೊಡಬೇಕಾದ್ದು ೪೦ ಲಕ್ಷ ರೂಪಾಯಿ. ಈಗ ೪೦ ಲಕ್ಷ ರೂಪಾಯಿಯನ್ನು ಕೊಡಬೇಕೇ ಅಥವಾ ಬರತಕ್ಕ ೭–೮ ಜನ ಸರ್ಕಾರಿ ಅಧಿಕಾರಿಗಳು ಯಾರು ಲೆಂಟ್ ಬೇಸಿಸ್ ಮೇಲೆ ಹೋಗಿದ್ದಾರೋ ಅವರಿಗೆ ಕೊಡುವುದನ್ನು ನಿಲ್ಲಿಸಬೇಕೇ ಎಂಬುದನ್ನು ಸರ್ಕಾರ ನಿರ್ಧಾರ ತೆಗೆದು ಕೊಳ್ಳುತ್ತದೆ.

ಶ್ರೀ ಬಿ. ರಾಮಚಂದ್ರ.—ಈಗಾಗಲೇ ಉತ್ತರದಲ್ಲಿ ಮುನಿಸಿಪಾಲಿಟಿ ನೌಕರರಿಗೆ ನಿವೃತ್ತಿ ವೇತನವನ್ನು ಒದಗಿಸಲಾಗಿದೆ ಎಂದು ಹೇಳಿದ್ದೀರಿ. ನನಗೆ ತಿಳಿದಮಟ್ಟಿಗೆ ಮುಂಗಳೂರು ನಗರಸಭೆಯಲ್ಲಿ ಎಷ್ಟೋ ಕಾರ್ಮಿಕರಿಗೆ ಯಾವುದೇ ನಿವೃತ್ತಿ ವೇತನವನ್ನೂ ಒದಗಿಸಿಲ್ಲ. ಇದು ತಮ್ಮ ಗಮನಕ್ಕೆ ಬಂದಿದೆಯೇ ? ಒಂದು ವೇಳೆ ತಮ್ಮ ಗಮನಕ್ಕೆ ಬಂದಿಲ್ಲದಿದ್ದರೆ ಇನ್ನು ಮೇಲಾದರೂ ಕ್ರಮ ಕೈಗೊಂಡು ನಿವೃತ್ತಿ ವೇತನವನ್ನು ಕೊಡಿಸುವ ಏರ್ಪಾಡು ಮಾಡುತ್ತೀರಾ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಯಾವ ಮುನಿಸಿಪಾಲಿಟಿಯಲ್ಲೂ ನಿವೃತ್ತಿ ವೇತನವನ್ನು ಇನ್ನೂ ಕೊಟ್ಟಿಲ್ಲ. ಕೊಡಬೇಕು ಎಂದು ಸರ್ಕಾರ ಆಜ್ಞೆ ಕಳಿಸಿದೆ. ಆದರೆ ಮುನಿಸಿಪಾಲಿಟಿ ಮತ್ತು ಕಾರ್ಪೊರೇಷನ್‌ಗಳು ಹಣಕಾಸಿನ ಪರಿಸ್ಥಿತಿಯನ್ನು ಹೊಂದಿಸಿಕೊಂಡು ಈ ಸೌಲಭ್ಯ ಕೊಡಬೇಕಾಗಿದೆ.

Construction of Cover duct in the Right Bank Kabini Channel

322. SRI M. C. BASAPPA (Chamarajanagar) Will the Chief Minister be pleased to state :—

(*a*) the progress achieved in the construction of cover duct in the Right Bank Kabini Channel for the year 1977–78 ;

(*b*) what is the balance of work yet to be done ;

(*c*) whether the work can be completed in time as contemplated in the agreement;

(*d*) if not, the time required to complete the same ?

SRI D. DEVARAJ URS (Chief Minister).—

(*a*) Mile No. 17 5 Grades completed.
Mile No. 21 4 Grades completed.
Mile No. 22 7 Grades completed.
Mile No. 29 4 Grades completed.

The total outlay to end of March 1978 is Rs. 110.00 lakhs.

(*b*) Mile No. 17 9 Grades in progress.
Mile No. 21 4 Grades in progress.
Mile No. 22 1 Grades in progress.
Mile No. 29 10 Grades in progress.

The total balance cost Rs. 182.90 lakhs as on 1st April 1978 at tendered rates.